ಆ) ಕಟ್ಟಡದ ಕೆಲಸಗಳು ಪೂರ್ಣಗೊಂಡಿವೆ. ಹಾಗೂ ವಿದ್ಯುತ್ ಸರಬರಾಜು ಕೆಲಸಗಳೂ ಪೂರ್ಣಗೊಂಡಿವೆ. ೧೯೮೬ ಏಪ್ರಿಲ್ ತಿಂಗಳಲ್ಲಿ ಒಳಚರಂಡಿ ವ್ಯವಸ್ಥೆ ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಹಿಸಿದ್ದು; ಈ ಎರಡೂ ಕೆಲಸಗಳು ಇನ್ನೂ ಸಾಗುತ್ತಿದ್ದು, ಪೂರ್ಣಗೊಂಡಿಲ್ಲದ ಕಾರಣ, ಮನೆಗಳನ್ನು ಹಂಚಿಕೆದಾರರ ವಶಕ್ಕೆ ನೀಡಿಲ್ಲ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಾಲೋನಿಯ ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ಕೆಲಸವನ್ನು ಪೂರ್ಣಗೊಳಿಸಿದ ನಂತರ ಮನೆಗಳನ್ನು ಹಂಚಿಕೆದಾರರ ವಶಕ್ಕೆ ನೀಡಲಾಗುವುದು.

ಶ್ರೀಮತಿ ಶಕುಂತಲಾ ಟಿ ಚೌಗಲೆ.—ಮಾನ್ಯ ಅಧ್ಯಕ್ಷರೇ ೧೯೮೬ ಏಪ್ರಿಲ್‌ವರೆಗೆ ಮೂರೂ ವರ್ಷಗಳಾದರೂ ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಮಂಡಲಿಯವರಿಗೆ ಏತಕ್ಕೆ ಪೂರ್ತಿ ಮಾಡಲಿಲ್ಲವೆಂದು ಕೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಕೆಲಸದಲ್ಲಿ ಸ್ವಲ್ಪ ಡಿಲೆಯಾಗಿರುವುದನ್ನು ಒಪ್ಪಿಕೊಂಡಿದ್ದೇನೆ. ಸಾಕಷ್ಟು ಡಿಲೆಯಾಗಿದೆ. ಈಗಾಗಲೇ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಏಪ್ರಿಲ್ ೩೦ನೇ ತಾರೀಖಿನೊಳಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮುಗಿಸಬೇಕೆಂದು ಹೇಳಿದ್ದೇನೆ.

ಶ್ರೀಮತಿ ಶಂಕುತಲಾ ಟಿ. ಚೌಗಲೆ.—ಜನರಿಗೆ ಯಾವುದಾದರೂ ನಿಶ್ಚಿತವಾದ ತಿಂಗಳು ಅಥವಾ ವರ್ಷ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಇಷ್ಟೇ ತಿಂಗಳು ಎಂದು ಹೇಳುವುದಕ್ಕಾಗುವುದಿಲ್ಲ. ಮೇ ಒಳಗೆ ಮಾಡಿ ಮುಗಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಬಿ. ಡಿ. ಎ. ದಲ್ಲಿ ಎರವಲು ಸೇವೆಗೆ ಬಂದ ಅಧಿಕಾರಿಗಳು.

೫೭೭. ಶ್ರೀ ಗೋಪಾಲ್ ಎಂ. ಕಾನಡೆ (ಸಿಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿ. ಡಿ. ಎ. ದಲ್ಲಿ ಕೆಲಸ ಮಾಡುವ ನೌಕರರ ಸಂಖ್ಯೆ ಎಷ್ಟು ಇವರಲ್ಲಿ ಎಷ್ಟು ಜನ ನೌಕರರು ಎರವಲು ಸೇವೆ ಮೇರೆಗೆ ಬಂದಿದ್ದಾರೆ. ಹಾಗೂ ಎಷ್ಟು ವರ್ಷಗಳಿಂದ ಬಿಡಿಎ ದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ?

ಆ) ಇವರಲ್ಲಿ ಹರಿಜನ ನೌಕರರ ಸಂಖ್ಯೆ ಎಷ್ಟು ? ಹಾಗೂ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಒಟ್ಟು ನೌಕರರು ೧೨೬೩ ಎರವಲು ಸೇವೆಯ ಮೇಲೆ ೩೧೧, ೩ ತಿಂಗಳಿಂದ ೫ ವರ್ಷದ ವರೆವಿಗೆ.

ಆ) ೩೧೧ ಎರವಲು ಸೇವೆಯವರ ಪೈಕಿ ೩೩ ಅಧಿಕಾರಿಗಳು/ನೌಕರರು ಪರಿಶಿಷ್ಟ ಜಾತಿಗೆ ಸೇರಿದವರು. ೩ ತಿಂಗಳಿಂದ ೫ ವರ್ಷದವರೆಗೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಎರವಲು ಸೇವೆ ಮೇಲೆ ಬಂದವರು ೩೧೧ ಜನ ಎಂದು ಹೇಳಿದ್ದೀರಿ. ಇದರಲ್ಲಿ ಪರಿಶಿಷ್ಟ ಜಾತಿಯವರು ೩೩ ಜನ ಅಧಿಕಾರಿಗಳು ಎಂದು ಹೇಳಿದ್ದೀರಿ. ಅದರೊಳಗೆ ಇಂಜಿನಿಯರ್ ಮೆಂಬರ್ಸ್ ಯಾರು ಯಾರು ಇದ್ದಾರೆ. ಆ ಮೇಲೆ ಇಂಜಿನೀಯರ್ಸ್ ಆಫೀಸರ್ಸ್ ಯಾರು ಯಾರು ಇದ್ದಾರೆ. ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಎಷ್ಟು ಮಂದಿ ಪೆಡ್ಯೂಲ್‌ಕ್ಯಾಸ್ಟ್‌ನವರು ಇದ್ದಾರೆ. ಎಷ್ಟು ಮಂದಿ ಜೂನಿಯರ್ ಇಂಜಿನೀಯರ್ಸ್ ಇದ್ದಾರೆ. ಸ್ಪೆಷಲ್ ಡಿ. ಸಿ. ಎಷ್ಟು ಮಂದಿ ಇದ್ದಾರೆ. ಕೆ. ಎ. ಎಸ್, ಎಷ್ಟು ಮಂದಿ ಇದ್ದಾರೆ. ಟೋಟಲ್ ಆವರ ಹೆಸರು ಆವರ ಹುದ್ದೆಯನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗ ಯಾವ ಯಾವ ಡಿಪಾರ್ಟ್‌ಮೆಂಟಿನಿಂದ ಎಷ್ಟೆಷ್ಟು ಮಂದಿ ಬಂದಿದ್ದಾರೆಂಬುದನ್ನು ಹೇಳುವುದಾದರೆ ಡಿ. ಪಿ. ಎ. ಆರ್. ನಿಂದ ೧೦ ಜನ ರೆವಿನ್ಯೂ ಡಿಪಾರ್ಟ್‌ಮೆಂಟ್ ನಿಂದ ೮ ಆರ್ಟಿಕಲ್ಟರ್ ನಿಂದ–೧ ಇನ್‌ಫರ್‌ಮೇಷನ್ ಅಂಡ್ ಬ್ರಾಡ್‌ಕಾಸ್ಟಿಂಗ್ ನಿಂದ–೧

ಸೆಕ್ರೆಟೇರಿಯೇಟ್ ನಿಂದ-೨, ವಿ. ಐ. ಎಸ್. ಎಲ್.-೨, ಲಾ ಡಿಪಾರ್ಟ್‌ಮೆಂಟಿನಿಂದ-೩, ಸ್ಟೇಟ್ ಅಕೌಂಟ್ಸ್‌ನಿಂದ-೬೪, ಪೋಲೀಸ್ ಡಿಪಾರ್ಟ್‌ಮೆಂಟ್‌ನಿಂದ-೧೨, ಸರ್ವೆ ಅಂಡ್ ಸೆಟಲ್‌ಮೆಂಟ್‌ನಿಂದ ೧೧, ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್‌ನಿಂದ-೧೯೯ ಆದರೆ ಜೂನಿಯರ್ ಇಂಜಿನೀಯರ್ಸ್ ಎಸ್‌ಸಿ ಮತ್ತು ಎಸ್‌ಟಿಯಲ್ಲಿ ಎಷ್ಟು ಮಂದಿ ಬ್ಯಾಕಿರುತ್ತಾರೆಂಬುದರ ಬಗ್ಗೆ ಇನ್‌ಫರ್‌ಮೇಷನ್ ನನ್ನಲ್ಲಿ ಇಲ್ಲ. ಅದನ್ನು ಆ ಮೇಲೆ ತರಿಸಿಕೊಡಕ್ಕೆ ನೆ.

ಶ್ರೀ ಗೋಪಾಲ ಮುಖಿಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಮೂರು ತಿಂಗಳು ೫ ವರ್ಷ ಎಂದು ಹೇಳುತ್ತಾರೆ. ೫ ವರ್ಷಗಳಾದ ನಂತರ ಮೂರು ತಿಂಗಳು ಹೊರಗಡೆ ಹೋಗಿ ಮತ್ತೆ ಬಂದಿರತಕ್ಕಂಥವರು ಎಷ್ಟೋಮಂದಿ ಇರುತ್ತಾರೆ. ಸುಮ್ಮನೆ ಹೆಸರಿಗೆ ಮೂರು ತಿಂಗಳು ಐದು ವರ್ಷ ಎಂದು ಇಟ್ಟಿದ್ದೀರಿ. ಆದರೆ ಬೇರೆ ಕಡೆಯಿಂದ ಬಂದವರು ಬಿ. ಡಿ. ಎ. ನಲ್ಲಿ ಲೂಟಿ ಹೊಡೆಯುತ್ತಿದ್ದಾರೆ. ಎಷ್ಟೋ ಮಂದಿ ಎರವಲು ಸೇವೆಗೆ ಸೇರಿಕೊಂಡವರು ಬೇರೆ ಕಡೆ ಮೂರು ತಿಂಗಳು ಕೆಲಸ ಮಾಡಿ ಮತ್ತೆ ಬಂದು ಸೇರಿಕೊಂಡಿರುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ಎರವಲು ಸೇವೆಯಲ್ಲಿ ಐದು ವರ್ಷಗಳ ಕಾಲ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಡೆಪ್ಯುಟೇಷನ್ ಮೇಲೆ ಬಂದವರಿಗೆ ಐದು ವರ್ಷಗಳ ಕಾಲ ಮ್ಯಾಕ್ಸಿಮಮ್ ಇರುತ್ತವೆ. ಆದರೆ ಮೇಲೆ ಇರುವುದಕ್ಕಾಗುವುದಿಲ್ಲ. ಆದರೆ ಕೆಲವು ಸಾರಿ ಸ್ಪೆಸಿಫಿಕ್ ಜಾಬ್‌ಗಳು ಅಂದರೆ ಪಿ. ಆರ್. ಒ, ಅಂಥವರನ್ನು ಹಲವಾರು ಡಿಪಾರ್ಟ್‌ಮೆಂಟ್‌ಗಳಿಂದ ಗೌರ್ನಮೆಂಟ್‌ನ್ನು ರಿಕ್ವೆಸ್ಟ್ ಮಾಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ತಾವು ಹೇಳಿದ ಹಾಗೆ ಜೂನಿಯರ್ ಇಂಜಿನೀಯರ್ಸನ್ನು ಐದು ವರ್ಷಗಳಾದ ಮೇಲೆ ಇಟ್ಟುಕೊಳ್ಳಬಹುದಕ್ಕಾಗುವುದಿಲ್ಲ. ಅವರನ್ನು ಆದಷ್ಟು ಪಟ್ಟಿಗೆ ಕಳುಹಿಸಿಕೊಡಲಾಗುತ್ತದೆ.

Restrictions in drawing the funds to Mandal Panchayats

67. SMT. MANORAMA MADHVARAJ (Udupi).—Will the Minister of Rural Development and Panchayat Raj wakfs be pleased to state ?

a) Whether it has come to the notice of the Government that Mandal Panchayats cannot execute public works continnously because of restrictions in drawing the funds upto Rs. 15,000 as under Account No-1.

b) If so, whether Government will take steps to revise this order and restrict monthly drawal to 10% of total amount allotted for the year ?

SRI M. P. PRAKASH (Minister for Rural Development and Panchayat Raj).—

a) No

b) Does not arise

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆ ಏನೆಂದರೆ ಪಂಚಾಯತ್ ನಂಬರ್-೧ ಅಕೌಂಟ್‌ನಲ್ಲಿ ೧೫ ಸಾವಿರ ಖರ್ಚುಮಾಡಬೇಕೆಂದು ರಿಸ್ಟ್ರಿಕ್ಟ್ ಮಾಡಿರುತ್ತೀರಿ. ಈ ಒಂದು ಹಣ ತೆರಿಗೆ ರೀತಿಯಲ್ಲಿ ಬರುವ ಹಣವಾಗಿರುತ್ತದೆ. ತಾವು ಹೇಳುತ್ತೀರಿ ನಿಮ್ಮ ಅಧಿಕಾರ ನಿಮ್ಮ ಕೈಯಲ್ಲಿ ಎಂದು. ಅಧಿಕಾರ ವಿಕೇಂದ್ರೀಕರಣ ಮಾಡಿ ಈ ರೀತಿ ರಿಸ್ಟ್ರಿಕ್ಷನ್ಸ್ ಮಾಡುವುದು ಸರಿಯೇ ?

ಶ್ರೀ ಎಂ.ಪಿ. ಪ್ರಕಾಶ್.—ಈ ವಿಚಾರದ ಬಗ್ಗೆ ಬಹಳ ಬೇಡಿಕೆ ಇದೆ. ಮಧ್ಯಂತರ ಮಂಡಲ್ ಪಂಚಾಯತ್‌ಗಳಲ್ಲಿ ೧೫ ಸಾವಿರ ರೂಪಾಯಿಗಳಿಗೂ ಹೆಚ್ಚು ಹಣ ಅವರ ಸಂಬಳ ಸಾರಿಗೆಯಾಗಿ ನೌಕರರಿಗೆ ಕೊಡಬೇಕಾಗಿದೆ ವರ್ಗ-೧ರಲ್ಲಿ ಬರತಕ್ಕಂಥ ಹಣದಲ್ಲಿ ತೆರಿಗೆ ರೂಪದಲ್ಲಿ ಬರತಕ್ಕಂಥ ಹಣದ ಜೊತೆಗೆ ತಲಾವಾರು ಕೊಡತಕ್ಕಂಥ ಹಣವೂ ಕೂಡ ಸೇರಿರುತ್ತದೆ. ಆದ್ದರಿಂದ ಇದನ್ನು ಒಂದು